# ಮುರುಘಾಮಠದಲ್ಲಿ ೨೦ ಜೋಡಿ ಸಾಮೂಹಿಕ ಕಲ್ಯಾಣ ಮಹೋತ್ಸವ



ವಿಶ್ವದಾದ್ಯಂತ ಕೊರೊನಾ ವೈರಸ್‌ನಿಂದ ಆತಂಕದ ವಾತಾವರಣ ನಿರ್ಮಾಣಗೊಂಡಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ನುಡಿದರು.

ನಗರದ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಚಿತ್ರದುರ್ಗ ಇವರ ಸಹಯೋಗದಲ್ಲಿ ಆಯೋಜಿಸಿದ್ದ 30ನೇ ವರ್ಷದ 3ನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಈ ತಿಂಗಳು ಮತ್ತು ಮುಂದಿನ ತಿಂಗಳು ಎಲ್ಲಾ ಕಡೆ ಜಾತ್ರೆಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಸಾವಿರಾರು ಪ್ರಾಣಿಗಳ ಪಶುಗಳ ಬಲಿಯನ್ನು ನಡೆಸಲಾಗುತ್ತದೆ. ಪ್ರಾಣಿಬಲಿ ಮಾಡಬಾರದೆಂಬ ನಿಯಮವಿದ್ದರೂ ಕಣ್ಣುತಪ್ಪಿಸಿ ಅನಾಗರಿಕವಾಗಿ ಅಮಾನವೀಯವಾಗಿ ನಡೆದುಕೊಳ್ಳಲಾಗುತ್ತಿದೆ. ಇದು ಪರಿಸರ ಮಾಲಿನ್ಯಕ್ಕೂ ಕಾರಣವಾಗಿ ಕಾಲರಾ, ಡೆಂಗ್ಯೂ, ಎಚ್1ಎನ್1 ನಂತಹ ಕಾಯಿಲೆಗಳು ಹರಡುವ ಸಂಭವವಿರುತ್ತದೆ. ಇದು ಅನಾಗರಿಕ ಮತ್ತು ಮೌಢ್ಯದ ಕೆಲಸ. ಇತ್ತೀಚೆಗೆ ವೈರಸ್ ಸೋಂಕಿನಿಂದಾಗಿ ಬಹುಬೇಗ ಎಲ್ಲ ಕಡೆ ಹರಡುತ್ತಿವೆ. ಮಾರಣಾಂತಿಕವಾಗಿವೆ. ಅದರಲ್ಲೂ ಇತ್ತೀಚೆಗೆ ಕೊರೊನಾ ವೈರಸ್‌ನಿಂದಾಗಿ ಆತಂಕದ ವಾತಾವರಣ ವಿಶ್ವದಾದ್ಯಂತ ಹರಡುತ್ತಿದೆ. ಈ ಹಿನ್ನೆಲೆಯಲ್ಲಿ ಬ್ರಿಟನ್‌ನಲ್ಲಿ ನಡೆಯುತ್ತಿದ್ದ ಭಾರಿ ಪುಸ್ತಕ ಮಾರಾಟ ಮೇಳವನ್ನು ಸ್ಥಗಿತಗೊಳಿಸಲಾಗಿದೆ. ರೋಗ ಬರುವುದಕ್ಕಿಂತ ಮುಂಚೆಯೇ ಜಾಗ್ರತೆ ವಹಿಸಬೇಕು. ಅದಕ್ಕಾಗಿ ನೀವು ಸ್ವಚ್ಛತೆ ಕಾಪಾಡಿಕೊಳ್ಳಿ. ಮುಖಕ್ಕೆ ಮಾಸ್ಕ್ ಧರಿಸಿ ಕೆಮ್ಮು ದಮ್ಮು ಬಾರದಂತೆ ನೋಡಿಕೊಂಡು ಸುರಕ್ಷಿತವಾಗಿರಿ ಎಂದು ಹೇಳಿದರು.

ಗೌರವ ಉಪಸ್ಥಿತಿ ವಹಿಸಿದ್ದ ಶ್ರೀ ಸದಾಶಿವ ಸ್ವಾ ಾಮಿಗಳು, ತೋಂಟದಾರ್ಯ ಮಠ ಕುದ್ನೂರು ಇವರು ಮಾತನಾಡಿ, ಕಲ್ಯಾಣ ಕರ್ನಾಟಕದ ಭಾಗದಲ್ಲಿ ಹಬ್ಬ, ಜಾತ್ರೆ ಸಂದರ್ಭಗಳಲ್ಲಿ ಹೆಚ್ಚು ಅಂದ್ರೆ 10 ಜೋಡಿ ವಿವಾಹಗಳಾಗುತ್ತವೆ. ಮುರುಘಾ ಶರಣರು 30 ವರ್ಷಗಳಿಂದ ವಿವಾಹ ನಡೆಸುತ್ತ, ದಾಸೋಹ ಶಿಕ್ಷಣಗಳ ಮೂಲಕ ಸಮಾಜ ಸೇವೆ ಮಾಡುತ್ತಿದ್ದಾರೆ. ಸಮಾಜದ ಕಟ್ಟಕಡೆಯವರು ಮುನ್ನೆಲೆಗೆ ಬರಬೇಕೆಂಬ ಉದ್ದೇಶದಿಂದ ಇತ್ತೀಚೆಗೆ ಶ್ರೀಗಳು ಅಸಂಖ್ಯ ಪ್ರಮಥರ ಗಣಮೇಳವನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ತಾವೊಬ್ಬ ಜಗದ್ಗುರುಗಳಾದರೆ ಸಾಲದು ಎಂದು ಬಸವಾದಿ ಶರಣರ ವಿಚಾರಗಳು ಜನಸಾಮಾನ್ಯರಿಗೂ ತಲುಪಬೇಕೆಂಬ ಹಿನ್ನೆಲೆಯಲ್ಲಿ ಹಲವು ಸ್ವಾಮಿಗಳನ್ನು ಹುಟ್ಟು ಹಾಕಿದ್ದಾರೆ. ಕರ್ನಾಟಕದ ಎಲ್ಲ ಮೂಲೆಗಳಿಗೂ ಜಮುರಾ ಕಲಾವಿದರನ್ನು ಕಳುಹಿಸಿ ಮಾನವೀಯ ಮೌಲ್ಯಗಳನ್ನು ಹಂಚುತ್ತಿದ್ದಾರೆ. ಹಸಿದವರಿಗೆ ಅನ್ನ ನೀಡುವ, ಬಿದ್ದವರನ್ನು ಮೇಲೆತ್ತುವ, ಖಾಲಿ

ಕೈಗಳಿಗೆ ಕಾಯಕ ನೀಡುವ ಮಠ ಶ್ರೀಮುರುಘಾಮಠ. ಪೂಜ್ಯರ ನಿರ್ದೇಶನದಲ್ಲಿ ನಡೆದದ್ದೇ ಆದರೆ ನಾವೆಲ್ಲ ಧನ್ಯರಾಗುತ್ತೇವೆ ಎಂದರು.

ಮುಖ್ಯಅತಿಥಿ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಜಿ. ವಿಜಯಕುಮಾರ್ ಮಾತನಾಡಿ, ಯಾವುದೇ ದೇಶ ಅಭಿವೃದ್ಧಿಯಾಗಬೇಕಾದರೆ ಅಲ್ಲಿನ ಜನ ಸಮಾಜ ಆರೋಗ್ಯವಾಗಿರಬೇಕು. ಶ್ರೀಮಠವು ಆರೋಗ್ಯಪೂರ್ಣ ಸಮಾಜದ ನಿರ್ಮಾಣಗೊಳ್ಳುವ ನಿಟ್ಟಿನಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವುದು, ಕಾಯಕಕ್ಕೆ ಪ್ರಾಧ್ಯಾನ್ಯತೆ ನೀಡುವ ಬಸವಾದಿ ಶರಣರ ವಿಚಾರಗಳನ್ನು ತಲುಪಿಸುವ ಕಾರ್ಯ ಮಾಡುತ್ತಿದೆ. ಕೆಎಸ್‌ಆರ್‌ಟಿಸಿಯನ್ನು ಜನರು ತಮ್ಮ ಅಭಿವೃದ್ಧಿಗೆ ಮತ್ತು ಶಿಕ್ಷಣಕ್ಕೆ ಪೂರಕವಾಗಿ ಬಳಸಿಕೊಳ್ಳಿರಿ ಎಂದರು.

ಈ ಸಂದರ್ಭದಲ್ಲಿ 1 ಜೋಡಿ ವಿಧವಾ ವಿವಾಹ ಸೇರಿದಂತೆ ಒಟ್ಟು 20 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ವೇದಿಕೆಯಲ್ಲಿ ದಾಸೋಹಿಗಳಾದ ಶ್ರೀಮತಿ ರಾಜಲಕ್ಷ್ಮಿ, ರವಿಶಂಕರರೆಡ್ಡಿ, ಸಂದೀಪ ಗುಂಡಾರ್ಪಿ ಇದ್ದರು. ಕೆಇಬಿ ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ, ತಿಪ್ಪಣ್ಣ ಮುಂತಾದವರಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಪ್ರೊ.ಸಿ.ಎಂ. ಚಂದ್ರಪ್ಪ ಸ್ವಾಗತಿಸಿದರು.